ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಮಾನ್ಯ ಸ್ವ ಮುಖ್ಯಮಂತ್ರಿ

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯ ಕರ್ನಾಟಕ ದಿನಾಂಕ : DATE : 12/07/2019

ಪಾಲಿಟಿಕಲ್ Quicks

## ರಾಜೀನಾಮೆ ಚಿಂತನೆಯಿಂದ ಹಿಂದೆ ಸರಿದ ಮುಖ್ಯಮಂತ್ರಿ

**ಬೆಂಗಳೂರು:** ಅತೃಪ್ತ ಶಾಸಕರ ರಾಜೀನಾಮೆ ಪತ್ರಗಳು ಸ್ಪೀಕರ್ ಅಂಗಳದಲ್ಲಿ ಕಾನೂನಾತ್ಮಕ ಹಾಗೂ ತಾಂತ್ರಿಕ ತೊಡಕುಗಳ ಮಧ್ಯೆ ಸಿಲುಕಿರುವುದು ಕಾಂಗ್ರೆಸ್ -ಜೆಡಿಎಸ್ 'ದೋಸ್ತಿ' ನಾಯಕರಲ್ಲಿ ಮೈತ್ರಿ ಸರಕಾರ ಉಳಿಸಿಕೊಳ್ಳುವ ಆಶಾವಾದವನ್ನು ಉಳಿಸಿದೆ.

ಸಿಎಂ ಎಚ್.ಡಿ.ಕುಮಾರಸ್ವಾಮಿ ಅವರು ಒಂದು ಹಂತದಲ್ಲಿ ಅಧಿಕಾರದಿಂದ ನಿರ್ಗಮನದ ಚಿಂತನೆಯಲ್ಲಿದ್ದರಾದರೂ, ಮಿತ್ರಪಕ್ಷ ಕಾಂಗ್ರೆಸ್ ನಾಯಕರು ಹಾಗೂ ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡರ ಸಲಹೆ ಆಧರಿಸಿ ಕೊನೇ ಕ್ಷಣದ ವರೆಗೆ ಸರಕಾರ ಉಳಿಸಿಕೊಳ್ಳುವ ತೀರ್ಮಾನಕ್ಕೆ ಬಂದಿದ್ದಾರೆ.

ಬೆಳಗ್ಗೆ ದೇವೇಗೌಡರ ನಿವಾಸಕ್ಕೆ ತೆರಳಿ ಸುದೀರ್ಘ ಸಮಾಲೋಚನೆ ನಡೆಸಿದ ಸಿಎಂ ಕುಮಾರಸ್ವಾಮಿ ಬಳಿಕ ಕುಮಾರಕೃಪ ಅತಿಥಿಗೃಹದಲ್ಲಿ ಕಾಂಗ್ರೆಸ್ ನಾಯಕರ ಸಭೆಗೆ ಹಾಜರಾದರು. ಬಿಜೆಪಿ ಚಿತಾವಣೆಗೆ ಸುಲಭವಾಗಿ ಮೈತ್ರಿ ಸರಕಾರ ಬಲಿಕೊಡುವುದು ಬೇಡ. ಕಾನೂನಾತ್ಮಕ ತೊಡಕುಗಳು ಅತೃಪ್ತ ಶಾಸಕರ ನಿಲುವು ಬದಲಾವಣೆಗೂ ಕಾರಣವಾಗಬಹುದು. ಜತೆಗೆ, ಶುಕ್ರವಾರದಿಂದ ಆರಂಭವಾಗುತ್ತಿರುವ ವಿಧಾನಮಂಡಲ ಅಧಿವೇಶನವೂ ಬಂಡಾಯ ಶಾಸಕರ ಪಾಲಿಗೆ ಬಿಸಿತುಪ್ಪವಾಗಲಿದ್ದು, ವಿಪ್ ಜಾರಿ ಮೂಲಕ ಇಕ್ಕಟ್ಟಿಗೆ ಸಿಲುಕಿಸಬಹುದು. ಹೀಗಾಗಿ, ಹೋರಾಟಕ್ಕೆ ಮುನ್ನವೇ ಸೋಲೊಪ್ಪುವುದು ಬೇಡ ಎಂಬ ತೀರ್ಮಾನಕ್ಕೆ ಬರಲಾಯಿತು.

ಮಾಜಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಾ.ಜಿ.ಪರಮೇಶ್ವರ್, ಸಚಿವ ಡಿ.ಕೆ.ಶಿವಕುಮಾರ್ ಸೇರಿದಂತೆ ಮಿತ್ರಪಕ್ಷದ ಹಲವು ನಾಯಕರು ಸರಕಾರ ಉಳಿಸಿಕೊಳ್ಳಲು ಒಗ್ಗಟ್ಟಿನ ಪ್ರಯತ್ನ ನಡೆಸಲು ಸಭೆಯಲ್ಲಿ ನಿರ್ಧರಿಸಿದರು. ಈ ಬೆಳವಣಿಗೆ ಬೆನ್ನಲ್ಲೇ, ಸಚಿವ ಸಂಪುಟ ಸಭೆಯಲ್ಲೂ ಸಹೋದ್ಯೋಗಿಗಳಿಂದ ಇದೇ ಸಲಹೆ ಮತ್ತು ಬೆಂಬಲ ಸಿಕ್ಕಿದ್ದು ಸಿಎಂ ಕುಮಾರಸ್ವಾಮಿ ಅವರ ಆತ್ಮವಿಶ್ವಾಸವನ್ನು ಹೆಚ್ಚಿಸಿದ್ದು, ಅಧಿವೇಶನ ಎದುರಿಸಲು ತಯಾರಿ ಮಾಡಿಕೊಂಡಿದ್ದಾರೆ.



**ಮೈತ್ರಿ ಸರಕಾರಕ್ಕೆ ಯಾವುದೇ ತೊಂದರೆ ಇಲ್ಲ. ಎಲ್ಲರೂ ಸೇರಿ ಸರಕಾರ ಉಳಿಸುತ್ತಾರೆ. ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡುವ ಪ್ರಶ್ನೆಯೇ ಇಲ್ಲ. 2009ರಲ್ಲಿ ಇದೇ ಸನ್ನಿವೇಶ ಸೃಷ್ಟಿಯಾಗಿದ್ದಾಗ ಅಂದಿನ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ರಾಜೀನಾಮೆ ನೀಡಿದ್ದರಾ?**

**-ಎಚ್.ಡಿ.ಕುಮಾರಸ್ವಾಮಿ**, ಮುಖ್ಯಮಂತ್ರಿ